Dec 250
T-P-2

R No KKNN 12 27-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi daily, Mysore 4



ಪ್ರಕಾಶಕರು ಶ್ರೀಮತಿ ಸರಸ್ವತಿದೇವಿ ಎಂ. ವಿ. ಸುಬ್ಬರಾವ್ ಸಂಪಾದಕರು ಎನ್. ಎಸ್. ಲಕ್ಷ್ಮೀನಾರಾಯಣ ಮತ್ತು ಎಂ. ವಿ. ಕೃಷ್ಣರಾವ್ [3 ಪೈಸೆ

ಬೆಲೆ ಏರಿಕೆಯಲ್ಲಿ ಭಾರತಕ್ಕೆ ಮೊದಲನೆ ಸ್ಥಾನ

ಬೆಲೆ ಏರಿಕೆ ಚರ್ಚೆ

ಬೆಂಗಳೂರು— ಅವಶ್ಯ ಪದಾರ್ಥಗಳ ಬೆಲೆ ಏರಿಕೆ ವಿಷಯದಲ್ಲಿ ಚರ್ಚೆಗೆ ಒಂದು ದಿನವನ್ನು ಇಡಲಾಗುವದೆಂದು ಶಾಸನಸಭೆಯಲ್ಲಿ ಸ್ಪೀಕರ್ ಶ್ರೀಮತಿ ನಾಗರತ್ನಮ್ಮ ನವರು ಹೇಳಿದರು

●

ವಜ್ರದ ಕಿರೀಟ ಕಳುವು

ಪೂನಾ— ಸತಾರ ಜಿಲ್ಲಾ ಔಂಧ್ ಅರಮನೆಯಲ್ಲಿ ರೂ 13 ಲಕ್ಷ ಬೆಲೆಯ ಚಿನ್ನಾಭರಣವೂ, ವಜ್ರಗಳೂ, ಅಮೂಲ್ಯ ಪದಾರ್ಥಗಳೂ ಕಳುವಾಗಿದೆ – ಈ ಪೈಕಿ ಛತ್ರಪತಿ ಶಿವಾಜಿಯು ಔಂಧ್ ಸ್ಥಾಪಕ ರಾಜನಿಗೆ ಬಹುಮಾನಿಸಿದ್ದ ವಜ್ರ ಖಚಿತ ಕಿರೀಟವೂ ಸೇರಿದೆ.

★

ಹಾಲಿನಲ್ಲಿ ಜಿರ್ಲೆ, ಸೊಳ್ಳೆ

ದಾವಣಗೆರೆ— ಏಜೆಂಟರ ಮೂಲಕ ಒಬ್ಬ ಗಿರಾಕಿಗೆ ಸರಬರಾಜು ಹಾಲಿನಲ್ಲಿ ಜೀವಿತ ಜಿರ್ಲೆ ಇದ್ದುದೂ, ಒಬ್ಬ ಪತ್ರಿಕೋದ್ಯೋಗಿಗೆ ಸರಬರಾಜಾದ ಹಾಲಿನಲ್ಲಿ ಸತ್ತ ಸೊಳ್ಳೆಗಳಿದ್ದುದೂ ವರದಿಯಾಗಿದೆ.

★

ಶಾಸನಸಭೆಯಲ್ಲಿ ಪ್ರೇಕ್ಷಕರ ಗಲಾಟೆ

ತಿರುವೇಂದ್ರಂ— ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ 3 ಮಂದಿ 'ನಮಗೆ 42 ಸೆಕ್ಲಾಜ್ ಬೇಡ" ಎಂದು ಕೂಗಿಕೊಂಡು ಹಸ್ತಪತ್ರಿಕೆ ಎಸೆದರು ; ಅಪರಿಗೆ ಮಾರ್ಚ್ 5 ರವರೆಗೆ ಸಾದಾ ಸಜಾ ವಿಧಿಸಲಾಯ್ತು ; ಬಾಲ್ಕನಿಯಿಂದ ಕೂಗಿಕೊಂದ 4 ಮಂದಿಯನ್ನು ಬಂಧಿಸಲಾಯ್ತು

★

ಹೊಸ ವಿಶ್ವವಿದ್ಯಾನಿಲಯಗಳಿಲ್ಲ

ಬೆಂಗಳೂರು— ರಾಜ್ಯದಲ್ಲಿ ಸದ್ಯಕ್ಕೆ ಹೊಸ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಇಲ್ಲವೆಂದು ಶಾಸನ ಭೆಯಲ್ಲಿ ತಿಳಿಸಲಾಯಿತು

ಕನ್ನಡ ಅಭಿವೃದ್ಧಿ

ಬೆಂಗಳೂರು— ಕನ್ನಡದ ಅಭಿವೃದ್ಧಿಯ ಮತ್ತು ಅದನ್ನು ಕಾಲಕ್ರಮ ವಿವಿಧ ಮಟ್ಟದಲ್ಲಿ ಅಧಿಕೃತ ಭಾಷೆಯಾಗಿ ಜಾರಿಗೆ ತರುವ ಕಾರ್ಯಗಳನ್ನು ವಿಮರ್ಶಿಸಲು 3 ಸಮಿತಿಗಳ ಸ್ಥಾಪನೆಯನ್ನು ಸರಕಾರ ಮಂಜೂರ್ಮಾಡಿದೆ.

○

ರಸ್ತೆ ಉತ್ತಮತೆ

ಮೈಸೂರು— ನಗರದ 9 ವಿಭಾಗದಲ್ಲಿ 70 ರಸ್ತೆಗಳನ್ನು ರೂ. 35 76 ಖರ್ಚಿನಲ್ಲಿ ಉತ್ತಮ ಪಡಿಸಲು ಮುನಿಸಿಪಾಲಿಟಿ ನಿರ್ಧರಿಸಿದೆಯೆಂದು ಕಮಿಷನರವರು ಹೇಳಿದರು.

★

ಶಿವಸೇನೆ ಹಾವಳಿ

ಬೆಂಗಳೂರು– ಬೊಂಬಾಯಿನಲ್ಲಿ ಕನ್ನಡಿಗರ ಮೇಲೆ ಶಿವಸೇನೆ ನಡೆಸಿದ ಪೌರ್ಜನ್ಯಕ್ಕೆ ಬಗ್ಗೆ ನ್ಯಾಯಾಂಗ ವಿಚಾರಣೆ ಮತ್ತು ಅಸ್ತಿ ನಷ್ಟಕ್ಕೆ ಪರಿಹಾರಕ್ಕೆ ಶಾಸನಸಭೆಯಲ್ಲಿ ಕೇಳಿಕೆಹಾಕಲಾಯಿತು.

ತಪ್ಪು ಪತ್ತೆಯಾಯಿತು

ಬೆಂಗಳೂರು— ಹಾಸನ ಲೋಕೋಪಯೋಗಿಇಲಾಖೆಯಲ್ಲಿ ವಿಜಿಲೆನ್ಸು ವಿಚಾರಣಾ ಸಮಿತಿ ವರದಿಯು ರೂ. 6.08 ಲಕ್ಷ ಹೆಚ್ಚು ಪಾವತಿಯಾಗಿರುವುದನ್ನು ಪತ್ತೆ ಪತ್ತೆಪಡಿಸಿದೆ.

ಭೂ ಸುಧಾರಣಾ ಶಾಸನ

ಬೆಂಗಳೂರು— ಅಧ್ಯಕ್ಷರ ಅನುಮತಿ ಪಡೆದ ಭೂಸುಧಾರಣಾ ತಿದ್ದುಪಡಿ ಮಸೂದೆಯು ಮಾರ್ಚ್ 1 ರಿಂದ ಜಾರಿಗೆ ಬರಲಿರುವುದು

★

ಗಂಧದ ಬೆಲೆ

ಬೆಂಗಳೂರು— ಕಳೆದ ಕೆಲವು ವಾರಗಳಲ್ಲಿ ಅಕ್ರಮ ವಾಗಿ ಮಾರಾಟಕ್ಕೆಯೊಗುತ್ತಿದ್ದ ರೂ 3 ಲಕ್ಷ ಬೆಲೆಯ ಗಂಧದ ಮರವೂ ಸೇರಿ ಅರಣ್ಯ ಪದಾರ್ಥಗಳು ವಶಪಡಿಸಿಕೊಳ್ಳಲಾಗಿದೆಂದು ಪೋಲೀಸ್ ಮಹಾನಿರೀಕ್ಷಕರಾಗಿದ್ದ ಶ್ರೀ ಸಿ. ವಿ. ಎಸ್. ರಾವ್ ಪತ್ರಿಕೆಯವರಿಗೆ ತಿಳಿಸಿದರು.

★

ಡೈರಿ ಮತ್ತು ಪಶುಸಂಗೋಪನ ಅಭಿವೃದ್ಧಿ

ಬೆಂಗಳೂರು— ರೂ. 40 ಕೋಟಿಯ ದಿನಕ್ಕೆ 15 ಲಕ್ಷ ಲಿಟರು ಹಾಲು ಉತ್ಪಾದಿಸುವ 10 ಲಕ್ಷ ಪ್ರಾಣಿಗಳನ್ನು ಪಡೆಯುವ, ಒಟ್ಟುಗೂಡಿದ ಡೈರಿ ಮತ್ತು ಪಶುಸಂಗೋಪನಾಭಿವೃದ್ಧಿಗೆ 5 ವರ್ಷಗಳ ಪ್ರಾಜೆಕ್ಟು ಯೋಜಿಸಲಾಗಿದೆ ; ಇದಕ್ಕೆ ವಿಶ್ವ ಬ್ಯಾಂಕ್ ನೆರವು ದೊರೆಯಲಿದೆ.

★

ಹಳೇ ಕಾಂಗ್ರೆಸ್‌ಗೆ ವಿಜಯ

ಬೆಂಗಳೂರು— ಸಂಕೇಶ್ವರ ಕ್ಷೇತ್ರದ ಉಪಚುನಾವಣೆಯಲ್ಲಿ ಹಳೇ ಕಾಂಗ್ರೆಸ್ ಉಮೇದುವಾರ ಶ್ರೀ ಎಸ್. ಎಸ್. ಪಾಟೀಲರು ಚುನಾಯಿತರಾದರು.

★

ಗಡಿ ಸಮಸ್ಯೆ

ಬೆಂಗಳೂರು— ಗಡಿ ವ್ಯವಸ್ಥೆ ಬಗ್ಗೆ ಮಹಾಜನ ಕಮಿಷನ್ ಶಿಫಾರಸ್ಸು ಜಾರಿ ತರದಿದ್ದರೆ, ಈಗ ಹೇಗಿದೆಯೋ ಹಾಗೇ ಇರಲೆಂದು ಮುಖ್ಯ ಮಂತ್ರಿ ದೇವರಾಜ ಅರಸ್ ತವರ ನಿಲುವನ್ನು ಶಾಸನಸಭಾ ಕಾಂಗ್ರೆಸ್ ಪಾರ್ಟಿ ಸಮರ್ಥಿಸಿದೆ.

ಕರ್ನಾಟಕ ಬಂದ್

ಮಂಗಳೂರು— ಬೆಲೆ ಏರಿಕೆ, ಭ್ರಷ್ಟಾಚಾರ, ಇತ್ಯಾದಿ ವಿರುದ್ಧ ರಾಜ್ಯದ ಸೋಸಲಿಸ್ಟು ಪಾರ್ಟಿ ಯೋಜಿಸಿರುವ "ಕರ್ನಾಟಕ ಬಂದ್" ಗೆ ಎಲ್ಲಾ ಪಾರ್ಟಿಗಳೂ, ಸಂಸ್ಥೆಗಳೂ, ಜನರೂ ಬೆಂಬಲ ನೀಡಬೇಕೆಂದು ಮಾರಕ್ಸಿಸ್ಟ್ ಕಮ್ಯೂನಿಸ್ಟು ಸಮಿತಿ ಮನವಿಮಾಡಿದೆ.

○

ಕಾರ್ಯಕರ್ತರ ಸಾವು

ರಾಂಪುರ— ಇಲ್ಲಿಯ ಚುನಾವಣಾ ಸ್ಟೇಷನ್ ಹೊರಗೆ ಚುನಾವಣಾ ಫೈರಿಂಗ್‌ಯಲ್ಲಿ ಒಬ್ಬ ಸ್ವತಂತ್ರ ಉಮೇದುವಾರರ ಬೆಂಬಲಿಗರ ಮೇಲೆ ಬೇರೆ ಪಕ್ಷದ ಕಾರ್ಯಕರ್ತರು ಮಾಡಿದ ಗೋಳೀಬಾರ್‌ನಿಂದ ಇಬ್ಬರು ಸತ್ತರು.

●

ಭಾರತಕ್ಕೆ ಪ್ರಥಮ ಸ್ಥಾನ

ಮದರಾಸು– ಕಳೆದ ಒಂದು ದಶಕದಲ್ಲಿ ಭಾರತದಲ್ಲಿನ ಬೆಲೆ ಏರಿಕೆ ಪ್ರಮಾಣವು ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನದು, ಎಂದು ಭಾರತೀಯ ಅಂಕೆಅಂಶ ಸಂಸ್ಥೆಯ ನಿರ್ದೇಶಕರಾದ ಶ್ರೀ ಮುಖರ್ಜಿಯವರು ಈಚೆಗೆ ಹೇಳಿದರು.

●

ಇಚ್ಛಿಸಿದ ಮಗು

ಬೆಲ್ಗ್ರೇಡ್— "ಇಚ್ಛಿಸಿದ ಮಗು ಸರಿಯಾದ ಮಗು" ಎಂಬುದು ಯುಗೊಸ್ಲೋವಿಯಾ ಕುಟುಂಬ ಯೋಜನ ಕಾರ್ಯಕ್ರಮದ ಸಿದ್ಧಾಂತವಾಗಿ ಅಲ್ಲಿಯು ಜನನ ಪ್ರಮಾಣ ತುಂಬಾ ತಗ್ಗಿದೆ ಅಲ್ಲಿ ಪರ್ವಕ್ಕೆ 400000 ಜನಗಳು, 300000 ಗರ್ಭಪಾತಗಳೂ ಆಗುತ್ತಿವೆ.

●

ಕೇದಾರನಾಥ್

ಶ್ರೀನಗರ (ಅಗರವಾಲ್)— ಹಿಮಾಲಯದ ಕೇದಾರನಾಥ್ ದೇವಾಲಯವು ಏಪ್ರಿಲ್‌ನಿಂದ 6 ತಿಂಗಳು ತೆರೆದಿರುತ್ತೆ.

ಶಿವಾಜಿ ಸಾಕ್ಷ್ಯ ಚಿತ್ರ

★

ಪೂನಾ— ಮಹಾರಾಷ್ಟ್ರ ಸರಕಾರ ನೇಮಿಸಿರುವ ಶಿವಾಜಿ ಮಹಾರಾಜರ ಕಿರೀಟಧಾರಣಾ ತ್ರಿ-ಶತಮಾನೋತ್ಸವ ಸಮಾರಂಭ ಶಮಿತಿಯು ಶಿವಾಜಿ ಮಹಾರಾಜರ ಸಾಕ್ಷ್ಯ ಚಿತ್ರವನ್ನು ಇಂಗ್ಲೀಷಿನಲ್ಲಿ ತಯಾರಿಸಲು ಯೋಜಿಸಿದೆ.

Quality Printing Neat Binding

Lakshminarasimha Press

Sivarampet, Mysore 1

Rugs, Sweaters & Kashmir Coats

ರಗ್ಗು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

A Fair Price Shop in Actual Practice

Contribute Liberally

to the National Defence Fund

SHAKTI

SUDHA

A Superb Tonic

Help The Gorakshana

— HumanitarianPropoganda Monthly ....

Protect the Cow

ವುಡ್‌ಲಾಂಡ್ 1 3 74 ರಿಂದ

ಅವೋಫು ಆರಂಭ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್, ನವೀನ್ ನಿಶ್ಚಲ್, ಠೀಪು

ದಿನ 4 ಪ್ರದರ್ಶನಗಳು – 10-30, 3, 6-30, 9-45

11-15 ರಿಂದ 12 ರ ವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಬುಕಿಂಗ್ ಇಡೆ

ಒಬ್ಬರಿಗೆ ಒಂದು ಟಿಕೆಟ್ ಕೊಡಲಾಗುವುದು

ಅಪೆರಾ 20 2 74 ರಿಂದ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಪಟ್ಟಣಾಂಯಣ

ದಿನ 3 ಪ್ರದರ್ಶನಗಳು

All India Blind Welfare Week

21 st February to 27 February 1974

Flag Day on 26 th February 1974

Donate generouly for the cause of the the Blind

Sponsored by :

sri sri Bijoy Krishna Ash am Relief Society [Regd]
Netaji Eye & General Hospital
P. O. Ramachand apur Ashram, Dist Purulia (W. Bengal)

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore